# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | **407** |
| **ಸದಸ್ಯರ ಹೆಸರು** | **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | **18.07.2024.** |
| **ಉತ್ತರಿಸಬೇಕಾದ ಸಚಿವರು** | **ಸನ್ಮಾನ್ಯ ಮುಖ್ಯಮಂತ್ರಿಯವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| **ಅ)** | ಬೆಳಗಾವಿ ಜಿಲ್ಲೆಯಲ್ಲಿ ಬುಡಕಟ್ಟು ಮಂಗೇಮಾರಿ ಜನಾಂಗದ ಒಟ್ಟು ಎಷ್ಟು ಕುಟುಂಬಗಳಿವೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನಲ್ಲಿ ಕಾತ್ಕರಿ ಜನಾಂಗದ (ಆಡು ಭಾಷೆಯಲ್ಲಿ ಮಂಗೇಮಾರಿ ಎಂದು ಕರೆಯಲ್ಪಡುವ) 40 ಕುಟುಂಬಗಳಿರುತ್ತವೆ. |
| **ಆ)** | ಈ ಜನಾಂಗದವರು ಇವತ್ತಿನವರೆಗೂ ಸರ್ಕಾರದ ಯೋಜನೆಗಳು ಮತ್ತು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳಾವುವು? | ಕಾತ್ಕರಿ ಜನಾಂಗದ (ಆಡು ಭಾಷೆಯಲ್ಲಿ ಮಂಗೇವಾರಿ ಎಂದು ಕರೆಯಲ್ಪಡುವ) ಖಾನಾಪುರ ತಾಲ್ಲೂಕಿನ ಗುಂಜಿ, ಬಾಳಗುಂದ, ಮುಂಡವಾಡ ಮತ್ತು ಬಾಚೋಳಿ ಗ್ರಾಮಗಳ ಸುತ್ತಮುತ್ತಲಿನ ಅರಣ್ಯ ಪ್ರದೇಶಗಳ ಅಂಚಿನಲ್ಲಿ ವಾಸ ಮಾಡುತ್ತಿದ್ದಾರೆ. ಸದರಿ ಜನರು ಒಂದೇ ಕಡೆ ವಾಸವಿರದೇ ಋತುಮಾನಕ್ಕೆ ತಕ್ಕಂತೆ ಬೇರೆ ಬೇರೆ ಕಡೆ ವಲಸೆ ಹೋಗುತ್ತಿದ್ದಾರೆ. 40 ಕುಟುಂಬಗಳ ಪೈಕಿ 15 ಕುಟುಂಬಗಳಿಗೆ ಪಡಿತರ ಚೀಟಿಗಳಿದ್ದು, ಪಡಿತರ ಆಹಾರ ಧಾನ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ.<br><br>ಸದರಿ ಜನಾಂಗದವರು ಅರಣ್ಯ ಪ್ರದೇಶದಲ್ಲಿ ವಾಸವಿದ್ದು, ಋತುಮಾನಕ್ಕೆ ತಕ್ಕಂತೆ ವಲಸೆ ಹೋಗುತ್ತಿರುವುದರಿಂದ ಮೂಲಭೂತ ಸೌಕರ್ಯ ಒದಗಿಸಲು ಸಾಧ್ಯವಾಗಿರುವುದಿಲ್ಲ. ಮೂಲಭೂತ ಸೌಕರ್ಯ ಕಲ್ಪಿಸಲು ಅರಣ್ಯ ಇಲಾಖೆ ಅನುಮತಿ ಪಡೆಯಲು ಕ್ರಮವಹಿಸಲಾಗುವುದು. |

**ಕಡತ ಸಂಖ್ಯೆ: STW/SECB/SAD/108/2024**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ